ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/4682(III)/2006-07** **ದಿನಾಂಕ:** 07 MAR 2019

ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನಾ ವೃತ್ತ,
ಬೆವಿಕಂ/ ಚಾವಿಸನಿನಿ/ ಮವಿಸಕಂನಿ/ ಹುವಿಸಕಂನಿ/ ಗುವಿಸಕಂನಿ.

ಮಾನ್ಯರೇ,

**ವಿಷಯ:** ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಸೇವೆಯನ್ನು ಖಾಯಂಗೊಳಿಸುವಿಕೆಯ ಅನುಷ್ಠಾನದ ಬಗ್ಗೆ.

**ಉಲ್ಲೇಖ:**
1. ನಿಗಮದ ದಿನಾಂಕ: **14.01.2019** ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ 4682(III)/2006-07.
2. ದಿನಾಂಕ: **16.02.2019** ರಂದು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಅಧಿಕಾರಿಗಳೊಂದಿಗೆ ವಿಕಲಚೇತನ ಕಂದಾಯ ಸಹಾಯಕರುಗಳ ಸೇವೆಯನ್ನು ಖಾಯಂಗೊಳಿಸುವಿಕೆಯ ಅನುಷ್ಠಾನ ಕುರಿತು ನಡೆದ ಸಭೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1 ರ ನಿಗಮದ ಆದೇಶದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಸೇವೆಯನ್ನು ಖಾಯಂಗೊಳಿಸಲು ಆದೇಶಿಸಲಾಗಿದೆ. ವಿಕಲಚೇತನ ಕಂದಾಯ ಸಹಾಯಕರುಗಳನ್ನು ಖಾಯಂಗೊಳಿಸುವ ಪ್ರಕ್ರಿಯೆ ಕುರಿತು ದಿನಾಂಕ: **16.02.2019** ರಂದು ನಿಗಮ ಕಾರ್ಯಾಲಯದಲ್ಲಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಚರ್ಚೆಯ ತರುವಾಯ, ಉಲ್ಲೇಖ-1 ರ ನಿಗಮದ ಆದೇಶದ ಅನುಷ್ಠಾನದ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ :-

1. **ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿರುವ ವಿಕಲಚೇತನ ಕಂದಾಯ ಸಹಾಯಕರುಗಳನ್ನು ಖಾಯಂಗೊಳಿಸುವ ಬಗ್ಗೆ:**

   ನಿಗಮದ ದಿನಾಂಕ: **14.01.2019** ರ ಆದೇಶದಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: **10.10.2018** ರ ಆದೇಶಕ್ಕೂ ಮುನ್ನವೇ ಕೆಲಸವನ್ನು ಬಿಟ್ಟುಹೋಗಿರುವ ಅಥವಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ವಿಕಲಚೇತನ ಕಂದಾಯ ಸಹಾಯಕರುಗಳನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಆದುದರಿಂದ, ದಿನಾಂಕ: **10.10.2018** ರಂದು ಕರ್ತವ್ಯನಿರ್ವಹಿಸುತ್ತಿದ್ದ ಕಂದಾಯ ಸಹಾಯಕರುಗಳನ್ನು ಮಾತ್ರ ಖಾಯಂಗಾಗಿ ಪರಿಗಣಿಸುವುದು.

2. **ವಿಕಲಚೇತನ ಕಂದಾಯ ಸಹಾಯಕರುಗಳನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ನೌಕರರೆಂದು ಪರಿಗಣಿಸುವ ಬಗ್ಗೆ:**

ವಿಕಲಚೇತನ ಕಂದಾಯ ಸಹಾಯಕರುಗಳನ್ನು ನಿಗಮದ ವತಿಯಿಂದ ನೇಮಕಾತಿಗೊಳಿಸಿ ಅವಶ್ಯಕತೆಯ ಮೇರೆಗೆ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ವಿಕಲಚೇತನ ಕಂದಾಯ ಸಹಾಯಕರುಗಳು ನೇಮಕಾತಿಯಾದ ದಿನಾಂಕದಿಂದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ಇವರುಗಳ ಸೇವೆ ವಿದ್ಯುತ್ ಸರಬರಾಜು ಕಂಪನಿಗಳಿಗೆ ಅವಶ್ಯಕವಾಗಿರುವುದರಿಂದ ಇವರುಗಳು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ನೌಕರರಾಗಿರುತ್ತಾರೆ. ಇವರುಗಳಿಗೆ ಅಂತರ ಕಂಪನಿಗಳ ವರ್ಗಾವಣೆಗೆ ಅವಕಾಶವಿರುವುದಿಲ್ಲ.

3. **ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ:**

**(ಅ)** ನಿಗಮದ ದಿನಾಂಕ: **14.01.2019** ರ ಆದೇಶದಲ್ಲಿ ತಿಳಿಸಿರುವಂತೆ, ನೇರ ನೇಮಕಾತಿ ಕೋಟಾದಡಿಯಲ್ಲಿ ಸಹಾಯಕ ಹುದ್ದೆಗಳು ಖಾಲಿ ಇದ್ದಲ್ಲಿ ಮಾತ್ರ ಪದವಿ ವಿದ್ಯಾರ್ಹತೆಯ ವಿಕಲಚೇತನ ಕಂದಾಯ ಸಹಾಯಕರುಗಳನ್ನು ಕೇವಲ ನೇರ ನೇಮಕಾತಿ ಕೋಟಾದಡಿಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಪರಿಗಣಿಸುವುದು. ಯಾವುದೇ ಕಾರಣಕ್ಕೂ ಇವರುಗಳನ್ನು ಬಡ್ತಿ ಕೋಟಾದ ಹುದ್ದೆಗಳಡಿಯಲ್ಲಿ ಪರಿಗಣಿಸುವಂತಿಲ್ಲ.

**(ಆ)** ಹುದ್ದೆಗಳು ಖಾಲಿ ಇಲ್ಲದೇ ಇದ್ದಲ್ಲಿ, ಅವಶ್ಯವಿರುವಷ್ಟು ಸಹಾಯಕ ಹಾಗೂ ಕಿರಿಯ ಸಹಾಯಕ ದರ್ಜೆ-2 ರ ಸಂಖ್ಯಾಧಿಕ ಹುದ್ದೆಗಳನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸೃಷ್ಟಿಸಿ, ಕಂಪನಿಗಳ ವ್ಯಾಪ್ತಿಯಲ್ಲಿನ ವಿವಿಧ ಕಾರ್ಯ ಮತ್ತು ಪಾಲನಾ ವೃತ್ತಗಳಿಗೆ ಹಂಚಿಕೆ ಮಾಡುವುದು.

**(ಇ)** ಕಾರ್ಯ ಮತ್ತು ಪಾಲನಾ ವೃತ್ತಗಳ ಅಧೀಕ್ಷಕ ಇಂಜಿನಿಯರ್(ವಿ) ರವರುಗಳು ತಮ್ಮ ವೃತ್ತಗಳ ವ್ಯಾಪ್ತಿಯಲ್ಲಿನ ವಿಕಲಚೇತನ ಕಂದಾಯ ಸಹಾಯಕರುಗಳ ಜೇಷ್ಠತೆಯನ್ನು ನಿಗದಿಪಡಿಸಿ ಅಧಿಕೃತ ಜ್ಞಾಪನಗಳನ್ನು ಜಾರಿಗೊಳಿಸುವುದು. ಇವರುಗಳ ಜ್ಯೇಷ್ಠತೆಯನ್ನು ದಿನಾಂಕ: **29.12.2010** ರಿಂದಲೇ ನಿಗದಿಪಡಿಸುವುದು.

**(ಈ)** ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳು ಕಿರಿಯ ಸಹಾಯಕ ದರ್ಜೆ-2 ರ ಹುದ್ದೆಗಳನ್ನು ತಮ್ಮ ಕಂಪನಿಯ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಯಲ್ಲಿ ಸೇರ್ಪಡೆಗೊಳಿಸಿ **ಅನುಬಂಧ-1** ರಲ್ಲಿ ತಿಳಿಸಿರುವಂತೆ ತಿದ್ದುಪಡಿ ಮಾಡುವುದು.

4. **ಪರೀಕ್ಷಾರ್ಥ ಅವಧಿಯ ಬಗ್ಗೆ:**

ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳು ದಿನಾಂಕ: **14.01.2019** ರಿಂದ **13.01.2020** ರ ವರೆಗೆ ಒಂದು ವರ್ಷದ ಪರೀಕ್ಷಾರ್ಥ ಅವಧಿಯಲ್ಲಿರುತ್ತಾರೆ. ಸದರಿ ಪರೀಕ್ಷಾರ್ಥ ಅವಧಿಯನ್ನು ಯಶಸ್ವಿಯಾಗಿ ಪೂರೈಕೆಯಾಗಿದೆ ಎಂದು ಘೋಷಿಸಲು ಈ ಕೆಳಗೆ ತಿಳಿಸಿರುವ ಅರ್ಹತೆಗಳ ಅಗತ್ಯತೆಯಿರುತ್ತದೆ:

**(ಎ)** ಕಂಪನಿಯಿಂದ ನಡೆಸಲಾಗುವ ತರಬೇತಿಯನ್ನು ಪಡೆಯತಕ್ಕದ್ದು ಮತ್ತು ತರಬೇತಿಯ ನಂತರ ನಡೆಸಲಾಗುವ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.

**(ಬಿ)** ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ ನಿಯಮಗಳ ಪ್ರಕಾರ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುವುದರಿಂದ ವಿನಾಯಿತಿ ಪಡೆಯತಕ್ಕದ್ದು.

**(ಸಿ)** ಒಳ್ಳೆಯ ನಡತೆ, ಹಾಜರಾತಿಯಲ್ಲಿ ಕಾಲನಿಷ್ಠೆ ಮತ್ತು ಕೆಲಸಗಳನ್ನು ಕಲಿಯುವ ಅಭಿರುಚಿ ಹೊಂದಿರತಕ್ಕದ್ದು. ಇವುಗಳನ್ನು ಅವರ ಮೇಲಧಿಕಾರಿಗಳು ನಿರ್ಧರಿಸಿ ವರದಿಗಳ ಮುಖಾಂತರ ತಿಳಿಸತಕ್ಕದ್ದು.

**(ಡಿ)** ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಚಾಲ್ತಿಯಲ್ಲಿರುವ ಎರಡು ಕಂಪ್ಯೂಟರ್ ಸಾಫ್ಟ್‌ವೇರ್/ ಪ್ಯಾಕೇಜ್‌ಗಳ ಜ್ಞಾನ ಹೊಂದಿರತಕ್ಕದ್ದು ಅಥವಾ ನೇಮಕ ಹೊಂದಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ತಮ್ಮ ಸ್ವಂತ ಖರ್ಚಿನಲ್ಲಿ ಎರಡು ಕಂಪ್ಯೂಟರ್ ಸಾಫ್ಟ್‌ವೇರ್/ ಪ್ಯಾಕೇಜ್‌ಗಳ ಜ್ಞಾನವನ್ನು ಪಡೆಯತಕ್ಕದ್ದು.

5. **<u>ವೇತನ ಶ್ರೇಣಿ ಹಾಗೂ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆಗೊಳಿಸುವ ಬಗ್ಗೆ:</u>**

**(ಅ)** ಸಹಾಯಕ ಹುದ್ದೆಗಳಲ್ಲಿ ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ಈ ಕೆಳಗಿನ ವೇತನ ಶ್ರೇಣಿಯನ್ನು ವಿಸ್ತರಿಸುವುದು:-

| | | |
|---|---|---|
| **1.** | ದಿನಾಂಕ: **29.12.2010** ರಿಂದ **31.03.2017:** ರವರೆಗಿನ ಅವಧಿಗೆ | ₹10250-300-11750-360-13910-420-16850-510-18890-570-20600-620-23080-700-25180 |
| **2.** | ದಿನಾಂಕ: **01.04.2017** ರಿಂದ ಮುಂದಿನ: ಅವಧಿಗೆ | ₹22920-670-26270-810-31130-940-37710-1140-42270-1270-46080-1390-51640-1560-56320 |

**(ಆ)** ಕಿರಿಯ ಸಹಾಯಕ ದರ್ಜೆ-2 ಹುದ್ದೆಗಳಲ್ಲಿ ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ಈ ಕೆಳಗಿನ ವೇತನ ಶ್ರೇಣಿಯನ್ನು ವಿಸ್ತರಿಸುವುದು:-

| | | |
|---|---|---|
| 1. | ದಿನಾಂಕ: **29.12.2010** ರಿಂದ **31.03.2017:** ರವರೆಗಿನ ಅವಧಿಗೆ | ₹8480-190-9050-240-10250-300-11750-360-13910-420-16850-510-18890-570-20600 |
| 2. | ದಿನಾಂಕ: **01.04.2017** ರಿಂದ ಮುಂದಿನ: ಅವಧಿಗೆ | ₹18930-430-20220-540-22920-670-26270-810-31130-940-37710-1140-42270-1270-46080 |

**(ಇ)** ಸಹಾಯಕ ಹಾಗೂ ಕಿರಿಯ ಸಹಾಯಕ ದರ್ಜೆ-2 ರ ಹುದ್ದೆಗಳಲ್ಲಿ ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ದಿನಾಂಕ: **01.01.2019** ರಿಂದ ಅನ್ವಯವಾಗುವಂತೆ ಮೇಲೆ ತಿಳಿಸಿರುವ ಪರಿಷ್ಕೃತ ವೇತನ ಶ್ರೇಣಿಯ ಕನಿಷ್ಠ ಹಂತದ ವೇತನದಲ್ಲಿ ಸಂಬಳವನ್ನು ಪಾವತಿಸುವುದು.

**<u>ಟಿಪ್ಪಣಿ:</u>**

**1.** ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳ ಹಾಜರಾತಿಯನ್ನು ಹಾಜರಾತಿ ಪುಸ್ತಕಗಳಲ್ಲಿ ದಿನಾಂಕ: **01.01.2019** ರಿಂದಲೇ ಪಡೆಯುವುದು.

**2.** ವಿಕಲಚೇತನ ಕಂದಾಯ ಸಹಾಯಕರುಗಳನ್ನು ದಿನಾಂಕ: **29.12.2010** ರಿಂದಲೇ ಅನ್ವಯವಾಗುವಂತೆ ಖಾಯಂಗೊಳಿಸಿರುವುದರಿಂದ ಆವರುಗಳಿಂದ **'ಕರ್ತವ್ಯ ವರದಿ'** **(Duty Report)** ತೆಗೆದುಕೊಳ್ಳುವ ಆವಶ್ಯಕತೆ ಇರುವುದಿಲ್ಲ.

**(ಈ)** ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳಿಗೆ ದಿನಾಂಕ: **29.12.2010** ರಿಂದ ಇವರು ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸುವವರೆಗೆ ಮೇಲೆ ತಿಳಿಸಿರುವ ವೇತನ ಶ್ರೇಣಿಗಳ ಕನಿಷ್ಠ ಹಂತದ ವೇತನದಲ್ಲಿ ಸಂಬಳವನ್ನು ಲೆಕ್ಕಚಾರ ಮಾಡಿ ಬಾಕಿ ಮೊತ್ತವನ್ನು ಪಾವತಿಸಬೇಕಿರುತ್ತದೆ. ಬಾಕಿ ಮೊತ್ತದ ಪಾವತಿಯ ಬಗ್ಗೆ **<u>ಪ್ರತ್ಯೇಕ ಆದೇಶ ಜಾರಿಗೊಳಿಸಲಾಗುವುದು.</u>**

**(ಉ)** ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳ ಪರೀಕ್ಷಾರ್ಥ ಅವಧಿ ದಿನಾಂಕ: **14.01.2020** ರಂದು ಪೂರ್ಣಗೊಂಡ ನಂತರ, ದಿನಾಂಕ: **29.12.2010** ರಿಂದ ದಿನಾಂಕ: **14.01.2020** ರವರೆಗೆ ಕಾಲಕಾಲಕ್ಕೆ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆಗೊಳಿಸಿ ವೇತನವನ್ನು ನಿಗದಿಪಡಿಸುವುದು ಹಾಗೂ ವೇತನ ನಿಗದೀಕರಣದ ಆರ್ಥಿಕ ಲಾಭದ ಬಾಕಿ ಮೊತ್ತವನ್ನು ಪಾವತಿಸಲು ಕ್ರಮವಹಿಸುವುದು.

**(ಊ)** ನೌಕರರ ಸ್ವಯಂ ಕಾರಣಗಳಿಂದ ದಿನಾಂಕ: 14.01.2020 ರ ಒಳಗೆ ಪರೀಕ್ಷಾರ್ಥ ಅವಧಿ ತೃಪ್ತಿಕರವಾಗಿ ಪೂರೈಕೆಯಾಗಿದೆ ಎಂದು ಘೋಷಣೆಯಾಗದೇ ಇದ್ದಲ್ಲಿ ಹಾಗೂ ಇದನ್ನು ವಿಸ್ತರಿಸಿದ್ದಲ್ಲಿ, ನಿಗಮದ ದಿನಾಂಕ: **17.04.1993** ರ ಆದೇಶ ಸಂಖ್ಯೆ: ಕವಿಮಂ/ಬಿ16/1219/76-77 ರ ಪ್ರಕಾರ, ವೇತನವನ್ನು ಕಾಲ ಕಾಲಕ್ಕೆ ಕಾಲ್ಪನಿಕವಾಗಿ ನಿಗದಿಪಡಿಸಿ ಆರ್ಥಿಕ ಲಾಭದ ಬಾಕಿ ಮೊತ್ತವನ್ನು ಪರೀಕ್ಷಾರ್ಥ ಅವಧಿಯನ್ನು ಪೂರ್ಣಗೊಳಿಸಿದ ದಿನಾಂಕದಿಂದ ಅನ್ವಯವಾಗುವಂತೆ ಪಾವತಿಸುವುದು.

6. **ರಜೆ:**

**(ಅ) ಅರ್ಧ ವೇತನ ಮತ್ತು ಪೂರ್ಣ ವೇತನ ರಜೆ:**

ಖಾಯಂಗೊಳಿಸಲಾದ ವಿಕಲಚೇತನ ಕಂದಾಯ ಸಹಾಯಕರುಗಳ ಖಾತೆಗೆ ದಿನಾಂಕ: **29.12.2010** ರಿಂದ ಅನ್ವಯವಾಗುವಂತೆ ಕವಿಮಂ ನೌಕರರ ಸೇವಾ ನಿಯಮಗಳ ನಿಬಂಧನೆ-**132** ರಿಂದ **136** ರವರೆಗೆ ತಿಳಿಸಿರುವಂತೆ ಅರ್ಧ ವೇತನ ರಜೆ ಮತ್ತು ನಿಬಂಧನೆ-**137** ರಿಂದ **139** ರವರೆಗೆ ತಿಳಿಸಿರುವಂತೆ ಪೂರ್ಣ ವೇತನ ರಜೆಯನ್ನು ಜಮೆ ಮಾಡುವುದು.

**(ಆ) ಗಳಿಕೆ ರಜೆ:**

ಖಾಯಂಗೊಳಿಸಲಾದ ವಿಕಲಚೇತನ ಕಂದಾಯ ಸಹಾಯಕರುಗಳ ಖಾತೆಗೆ ದಿನಾಂಕ: **01.01.2011** ರಿಂದ **01.12.2011** ರವರೆಗೆ ಕವಿಮಂ ನೌಕರರ ಸೇವಾ ನಿಯಮಗಳ ನಿಬಂಧನೆ-**126(ಸಿ)** ಪ್ರಕಾರ ಗಳಿಕೆ ರಜೆಯನ್ನು ಜಮೆ ಮಾಡುವುದು. ಜನವರಿ-**2012** ರಿಂದ ಮುಂದಕ್ಕೆ ಸದರಿ ನಿಯಮಗಳ ನಿಬಂಧನೆ-**126(ಎ)** ರ ಪ್ರಕಾರ ಗಳಿಕೆ ರಜೆಯನ್ನು ಜಮೆ ಮಾಡುವುದು.

7. **ಗಳಿಕೆ ರಜೆಯನ್ನು ಬಿಟ್ಟುಕೊಡುವ/ನಗದೀಕರಣ ಬಗ್ಗೆ (Surrender & Encashment of Earned leave):**

**(ಅ)** ಕವಿಮಂ ಲೆಕ್ಕ ಸಂಹಿತೆ ಸಂಪುಟ-**2** ಭಾಗ-**ಬಿ** ಯ ಕಂಡಿಕೆ-**504** ರಲ್ಲಿ ತಿಳಿಸಿರುವ ನಿಯಮಗಳನ್ವಯ ಹಾಗೂ ಸದರಿ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸಲಾಗಿರುವ ಆದೇಶ/ಸುತ್ತೋಲೆ/ತಿದ್ದುಪಡಿ ಅಧಿಸೂಚನೆಗಳನ್ವಯ ಗಳಿಕೆ ರಜೆ ಬಿಟ್ಟುಕೊಟ್ಟು ನಗದೀಕರಣಗೊಳಿಸಬಹುದಾಗಿದೆ.

**(ಆ)** ವಿಕಲಚೇತನ ಕಂದಾಯ ಸಹಾಯಕರುಗಳು ಜನವರಿ-**2012** ರಿಂದ ಮುಂದಕ್ಕೆ ಜಮೆಯಲ್ಲಿರುವ ಗಳಿಕೆ ರಜೆಯಲ್ಲಿ ವಾರ್ಷಿಕ ಕನಿಷ್ಟ **30** ದಿನಗಳು ಹಾಗೂ ಗರಿಷ್ಟ **60** ದಿನಗಳಿಗೆ ಮೀರದಂತೆ ಸ್ವ-ಇಚ್ಛೆಯಂತೆ ಬಿಟ್ಟುಕೊಟ್ಟು ನಗದೀಕರಣಗೊಳಿಸಬಹುದಾಗಿದೆ.

**(ಇ) 2012** ರಿಂದ **2018** ರ ಅವಧಿಯ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಪಡೆಯಲು ವಾರ್ಷಿಕವಾರು ಅರ್ಜಿಯನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು ಮತ್ತು ನಗದೀಕರಣದ ಮೊತ್ತವನ್ನು ಪೂರ್ಣವಾಗಿ ಪಾವತಿಸಬಹುದಾಗಿದೆ.

8. **01.01.2011** ರಿಂದ **31.12.2018** ರವರೆಗೆ ಮೇಲೆ ತಿಳಿಸಿರುವ ತತ್ಪರಿಣಾಮದ ಸವಲತ್ತುಗಳನ್ನು (consequential benefits) ಹೊರತುಪಡಿಸಿ ಪ್ರಸೂತಿ ರಜೆ, ಮಕ್ಕಳ ಪಾಲನೆಗಾಗಿ ವಿಶೇಷ ರಜೆ, ಪಿತೃತ್ವ ರಜೆ, ಇನ್ನಿತರೆ ಯಾವುದೇ ರಜೆ, ಪ್ರಭಾರ ಭತ್ಯೆ, ಪ್ರಯಾಣ ಭತ್ಯೆ, ದ್ವಿಗುಣ ವೇತನ ಭತ್ಯೆ, ವೈದ್ಯಕೀಯ ಮರುಪಾವತಿ ಭತ್ಯೆ ಮತ್ತು ಇನ್ನಿತರೆ ಯಾವುದೇ ಭತ್ಯೆ/ಸವಲತ್ತುಗಳನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ.

9. **ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಳ್ಳುವುದರ ಬಗ್ಗೆ:**

**(ಅ)** ಸಹಾಯಕ ಹುದ್ದೆಗಳಲ್ಲಿ ಖಾಯಂಗೊಂಡಿರುವ ವಿಕಲಚೇತನ ಕಂದಾಯ ಸಹಾಯಕರುಗಳು ಸಹಾಯಕ ದರ್ಜೆ ಭಾಗ-ಎ ಮತ್ತು ಬಿ ಪರೀಕ್ಷೆಗಳನ್ನು ಪರೀಕ್ಷಾರ್ಥ ಅವಧಿ ಪೂರ್ಣಗೊಂಡ ನಂತರ ಕೂಡಲೇ ತೆಗೆದುಕೊಳ್ಳಬಹುದಾಗಿರುತ್ತದೆ.

(ಆ) ಕಿರಿಯ ಸಹಾಯಕ ದರ್ಜೆ-2 ರ ಹುದ್ದೆಗಳಲ್ಲಿ ಖಾಯಂಗೊಂಡಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಪರೀಕ್ಷಾರ್ಥ ಅವಧಿ ಘೋಷಣೆ ಅಥವಾ ಕಿರಿಯ ಸಹಾಯಕ ಹುದ್ದೆಯ ಬಡ್ತಿಗೆ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅವಶ್ಯಕತೆ ಇರುವುದಿಲ್ಲ.

(ಇ) ಕಿರಿಯ ಸಹಾಯಕ ದರ್ಜೆ-2 ರ ಹುದ್ದೆಯಿಂದ ಕಿರಿಯ ಸಹಾಯಕ ಹುದ್ದೆಯ ಬಡ್ತಿಗೆ ಕಂಪನಿಗಳ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಮುಂದೆ **ಪ್ರತ್ಯೇಕವಾಗಿ ಮಾರ್ಗಸೂಚಿ ಜಾರಿಗೊಳಿಸಲಾಗುವುದು.**

**10.** ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳ ಸೇವಾ ಪುಸ್ತಕಗಳನ್ನು ಕೂಡಲೇ ತೆರೆದು ಅವರನ್ನು ಖಾಯಂಗೊಳಿಸಿರುವುದನ್ನು ದಿನಾಂಕ: **14.01.2019** ರ ನಿಗಮದ ಆದೇಶದೊಂದಿಗೆ ಲಗತ್ತಿಸಿರುವ ಷರತ್ತು ಹಾಗೂ ನಿಬಂಧನೆಗಳು ಹಾಗೂ ಇತರೆ ಅಂಶಗಳನ್ನು ಸೇವಾ ಪುಸ್ತಕಗಳಲ್ಲಿ ನಮೂದಿಸುವುದು. ಸದರಿ ಆದೇಶದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕರಾರು ಪತ್ರವನ್ನು ಪಡೆದು ಸೇವಾ ಪುಸ್ತಕದಲ್ಲಿ ಲಗತ್ತಿಸುವುದು.

**11.** ಖಾಯಂಗೊಂಡ ವಿಕಲಚೇತನ ಕಂದಾಯ ಸಹಾಯಕರುಗಳು ಎನ್.ಡಿ.ಸಿ.ಪಿ.ಎಸ್ ಯೋಜನೆಗೆ ಒಳಪಡುವುದರಿಂದ ನಿಯಮಗಳ ಪ್ರಕಾರ ಎನ್.ಡಿ.ಸಿ.ಪಿ.ಎಸ್ ಯೋಜನೆಯನ್ನು ದಿನಾಂಕ: 29.12.2010 ರಿಂದ ಅನ್ವಯಿಸುವಂತೆ ಜಾರಿಗೊಳಿಸಲು ಕ್ರಮವಹಿಸುವುದು.

**12.** ನಿಗಮದ ದಿನಾಂಕ: 16.02.2019 ರ ಆದೇಶದಲ್ಲಿ ತಿಳಿಸಿರುವ ವಿಕಲಚೇತನ ಕಂದಾಯ ಸಹಾಯಕರುಗಳ ಹೆಸರುಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಹುದ್ದೆಗಳು ಅದಲು ಬದಲು ಆಗಿದ್ದಲ್ಲಿ ಅಥವಾ ಇನ್ಯಾವುದೇ ವ್ಯತ್ಯಾಸವಿದ್ದಲ್ಲಿ ಇವುಗಳನ್ನು ಸರಿಪಡಿಸಲು ಮಾಹಿತಿಯನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಇವರ ಮುಖಾಂತರ ನಿಗಮ ಕಾರ್ಯಾಲಯಕ್ಕೆ ಒದಗಿಸುವುದು.

ಸದರಿ ವಿಷಯದಲ್ಲಿ ಯಾವುದೇ ಸ್ಪಷ್ಟೀಕರಣದ ಅವಶ್ಯಕತೆ ಇದ್ದಲ್ಲಿ ನಿಗಮ ಕಾರ್ಯಾಲಯಕ್ಕೆ ಪತ್ರ ಬರೆದು ಪಡೆಯುವುದು.

**ತಮ್ಮ ವಿಶ್ವಾಸಿ**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ನಿರ್ದೇಶಕರು(ಹಣಕಾಸು), ಬೆವಿಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಎಸ್ಕಾಂ.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
5. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ/ಎಸ್ಕಾಂ.
6. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ)/ ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarna ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

7. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
9. ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ/ಎಸ್ಕಾಂ.

**ಪ್ರತಿಗಳನ್ನು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(659) ಹಾಗೂ ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.

5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳ ಪಂಗಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು.

'Annexure-1'

## NOTIFICATION

**Sub:** Amendment to R & P Regulations-Reg.

**Ref:**
1. Employment Notification No.KPTCL/B16/4682/2006-07 dated: 18.5.2007.
2. Hon'ble High Court of Karnataka order No:15712-15825/2015(S-RES) dated: 10.10.2018.
3. Order No: KPTCL/B16/4682/2006-07 dated: 14.01.2019.
4. This Office Note No:________

***

The Company is pleased to further amend the Recruitment and Promotion Regulations, Employees (Probation) Regulations and Employees (Seniority) Regulations, as here under:

1. **TITLE AND COMMENCEMENT:**

   a. These Regulations shall be called the Recruitment and Promotion Regulations, Employees (Probation) Regulations and Employees (Seniority) (Amendment) Regulations, 2019, as here under.

   b. These shall come into force with effect from 29.12.2010.

2. **AMENDMENT TO METHOD OF RECRUITMENT AND MINIMUM QUALIFICATION PRESCRIBED IN SL NO: 8A UNDER-VII OF RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS:**

   The Method of Recruitment and Minimum Qualification prescribed for direct recruitment for the post of Junior Assistant Grade-2, Sl.No.8A, under Chapter VII of Recruitment and Promotion Regulations Employees (Probation) Regulations and Employees (Seniority) Regulations is amended as indicated in the Annexure appended to the Notification.

-Sd-

**Copies to:**

Annexure to Notification No: .................... dated:

**INSERTION OF THE POST OF JUNIOR ASSISTANT GRADE-2 - METHOD OF RECRUITMENT AND MINIMUM QUALIFICATION FOR THE POST OF JUNIOR ASSISTANT GRADE-2 UNDER CHAPTER-VII OF RECRUITMENT AND PROMOTION REGULATIONS EMPLOYEES (PROBATION) REGULATIONS AND EMPLOYEES (SENIORITY) REGULATIONS.**

| Sl No. | Category of the post | Cadre | Method of Recruitment | Minimum Qualifications | Appointing/Promoting Authority |
|---|---|---|---|---|---|
| 8A | Junior Assistant Grade-2 | Circle Wise | By absorption from among the SSLC Qualified Physically Challenged Revenue Assistants who have served on contract basis from 2007 and continuously working as on 10.10.2018. | i) Should have passed S.S.L.C or 10th standard examination.<br>ii) Should be on probation for one year.<br>iii) The following are required to complete the probationary period satisfactorily.<br>a) Should undergo training conducted by the Company and pass the Test at the end of the training.<br>b) Should pass Kannada Language test or obtain exemption from passing the Kannada Language Test as per regulations.<br>c) Should maintain good conduct, punctuality in attendance and aptitude for learning the jobs, these should be assessed and reported by Official superiors through reports.<br>d) Should possess the knowledge in any two of the Computer Softwares/Packages being used in ESCOMs or shall acquire the knowledge of the same at their own cost within a period of three months from the date of appointment. | Superintending Engineer (Elec.), O & M Circle. |

-Sd-